




# ಬೀದಿ ವ್ಯಾಪಾರಿಗಳೇ ಒಂದಾಗಿ!!! ಹೋರಾಟಕ್ಕೆ ಮುಂದಾಗಿ!

- **ಎತ್ತಂಗಡಿ ಮಾಡಿರುವ ಕಾವೇರಿನಗರ, ಶಿವಾಜಿನಗರ, ಕೋರಮಂಗಲ ಬೀದಿ ವ್ಯಾಪಾರಿಗಳಿಗೆ ನ್ಯಾಯ ನೀಡಿ!**
- **ಬೆಂಗಳೂರು ನಗರ ಬಡ್ಜೆಟ್‌ನಲ್ಲಿ ಬೀದಿ ವ್ಯಾಪಾರಿಗಳಿಗೂ ಪಾಲು ನೀಡಿ!**

## ಮಾರ್ಚ್ 10, ಬೆಳಿಗ್ಗೆ 10.00 ಘಂಟೆಗೆ, ಬಿ.ಬಿ.ಎಂ.ಪಿ ಕೇಂದ್ರ ಕಚೇರಿ




ಕಳೆದ ಕೆಲವು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಮಾಲ್ ಹಾಗು ದೊಡ್ಡ ಶೋ–ರೂಮ್‌ಗಳ ಸುರಿಮಳೆಯೇ ಆಗಿದೆ. ಆದರೂ ಸಹ, ಲಕ್ಷಾಂತರ ಜನ ಬೆಂಗಳೂರಿನವರು ತಮ್ಮ ಕುಟುಂಬಕ್ಕೆ ಬೇಕಾದ ದಿನಬಳಕೆಯ ವಸ್ತುಗಳನ್ನು ಬೀದಿ ವ್ಯಾಪಾರಿಗಳ ಬಳಿಯೇ ಕೊಳ್ಳುತ್ತಾರೆ. ಮೇಲೆ ಸೂಚಿಸಿರುವ ಹಾಗೆ ಬೀದಿ ವ್ಯಾಪಾರದಿಂದ ಅನೇಕ ಅನುಕೂಲಗಳಿವೆ. ಆದರೆ ಸರ್ಕಾರವು , ಗೌರವದಿಂದ ಸ್ವ–ಉದ್ಯೋಗದಲ್ಲಿ ತೊಡಗಿರುವ ಬೀದಿ ವ್ಯಾಪಾರಿಗಳನ್ನು ನೆಮ್ಮದಿಯಿಂದ ಜೀವನಮಾಡಲು ಬಿಡುತ್ತಿಲ್ಲ.

ಕಾವೇರಿನಗರದ ಪೈಪ್ಲೈನ್ ರಸ್ತೆಯ 50 ವ್ಯಾಪಾರಿಗಳನ್ನು ಪೋಲೀಸ್ ಹಾಗು ಬಿ.ಬಿ.ಎಂ.ಪಿ ಅಧಿಕಾರಿಗಳು ಸೇರಿ, ಡಿಸೆಂಬರ್ 201ರಲ್ಲಿ ಅವರ ವ್ಯಾಪರದ ಸ್ಥಳದಿಂದ ಒಕ್ಕಲೆಬ್ಬಿಸಿದ್ದಾರೆ. ಅದೇ ರೀತಿ ಶಿವಾಜಿನಗರದ 250 ಕ್ಕು ಹೆಚ್ಚು ವ್ಯಾಪಾರಿಗಳನ್ನು, ಮೇ 2015ಕ್‌ರಿಂದ ಸಂಚಾರಿ ಪೋಲೀಸರು ವ್ಯಾಪಾರ ಮಾಡಲು ಬಿಡದೆ ಅತಿ ಕಿರುಕುಳ ನೀಡುತಿದ್ದಾರೆ. ಕೋರಮಂಗಲದ ವ್ಯಾಪಾರಿಗಳಿಗೆ ಪಾದಚಾರಿ ಮಾರ್ಗ ನಿರ್ಮಾಣ ಮಾಡುವ ನೆಪದಲ್ಲಿ ಬಿ.ಬಿ.ಎಂ.ಪಿ ಯವರು ವ್ಯಾಪಾರ ಮಾಡಲು ಬಿಡುತಿಲ್ಲ, ಆದರೆ ಕಾಮಗಾರಿ ಸಹ ಚಾಲನೆಯಾಗಿಲ್ಲ. ಜಯನಗರ 9 ನೇ ಬ್ಲಾಕಿನ ಬೀದಿ ವ್ಯಾಪಾರಿಗಳಿಗೆ ಅಲ್ಲಿನ ಸ್ಥಳೀಯ ನಿವಾಸಿಗಳು ಕಿರುಕುಳ ನೀಡುತಿದ್ದಾರೆ. ಅಲ್ಲಿನ ಕೆಲವು ನಿವಾಸಿಗಳು ಅವರ 1–2 ಕಾರ್‌ಗಳನ್ನು ರಸ್ತೆ ಹಾಗು ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿ ವ್ಯಾಪರಿಗಳ ತಳ್ಳುವ ಗಾಡಿಗಳನ್ನು ದೂಡಿ, ಅವರನ್ನು ಕೀಳಾಗಿ ನೋಡಿ, ಕಡೆಗಣಿಸುತಿದ್ದಾರೆ. ಇದು ಎಂತಹ ನ್ಯಾಯ?

ಇಂತಹ ಅನ್ಯಾಯದ ಎತ್ತಂಗಡಿ ಆಗಬಾರದೆಂದೇ ಸರ್ವೋಚ್ಚ ನ್ಯಾಯಲಯವು, ಮಹಾರಾಷ್ಟ್ರ ಏಕ್ತಾ ಹಾಕರ್ಸ್ ಯೂನಿಯನ್ ಹಾಗೂ ಮತ್ತೊಂದು v/s ಮುನಿಸಿಪಲ್ ಕಾರ್ಪೊರೇಷನ್, ಗ್ರೇಟರ್ ಮುಂಬೈ ಹಾಗೂ ಇತರರಿಗೆ ಸಂಬಂಧಿಸಿದಂತೆ, ನಾಗರೀಕರ ಮನವಿ ಸಂ.4156–4157/2002ರಲ್ಲಿ 9ನೇ ಸೆಪ್ಟೆಂಬರ್ 2013 ರಂದು, ನಮ್ಮ ಹಕ್ಕನ್ನು ರಕ್ಷಿಸಿ ಅದೇಶ ನೀಡಿದೆ. ಕೇಂದ್ರ ಸರ್ಕಾರವು ಸಹ 2014ರಲ್ಲಿ ಬೀದಿ ವ್ಯಾಪಾರಿಗಳ (ಜೀವನೋಪಾಯ ರಕ್ಷಣೆ ಹಾಗು ನಿಯಂತ್ರಣ) ಕಾಯ್ದೆ, 2014ರನ್ನು ಜಾರಿಗೆ ತಂದಿದೆ. ಬೀದಿ ವ್ಯಾಪಾರಿಗಳ ಕಾನೂನಿನ ಕಲಂ 3(3) ಪ್ರಕಾರ, ಬಿ.ಬಿ.ಎಂ.ಪಿಯವರು ಸಮೀಕ್ಷೆ ಮಾಡುವ ತನಕ ನಮ್ಮನ್ನು ಎತ್ತಂಗಡಿ ಮಾಡುವಂತಿಲ್ಲ. ಇದನ್ನು ಪಾಲಿಸಬೇಕೆಂದು ನಮ್ಮ ಉಚ್ಚ ನ್ಯಾಯಲಯ ಕೂಡ , ಸೆಪ್ಟೆಂಬರ್ 22, 2014ರಂದು ಆದೇಶ ನೀಡಿದೆ. ಹಾಗಾಗಿ, ನಮ್ಮನ್ನು ಒಕ್ಕಲೆಬ್ಬಿಸುವುದು ಕಾನೂನಿನ ಉಲ್ಲಂಘನೆಯಾಗಿರುತ್ತದೆ. ಇದೆಲ್ಲದರ ಬಗ್ಗೆ ನಗರದ ಪೋಲೀಸ್ ಆಯುಕ್ತರು ಸಹ ಸುತ್ತೋಲೆ ಹೊರಡಿಸಿದ್ದಾರೆ! ಹೀಗಿದ್ದರು ಸಹ ಬಿ.ಬಿ.ಎಂ.ಪಿ, ಪೋಲೀಸರು ಹಾಗು ಕೆಲವು ಸ್ಥಳೀಯರು ನಮ್ಮ ಹಕ್ಕನ್ನು ಕಿತ್ತುಕೊಳ್ಳುತಿದ್ದಾರೆ. ಕಾನೂನು ತಿಳಿದಿರುವ ಹಿರಿಯ ಅಧಿಕಾರಿಗಳೇ ಕಾನೂನನ್ನು ಉಲ್ಲಂಘಿಸಿದರೆ ನಾವು ಹೋಗುವುದಾದರು ಎಲ್ಲಿ? ನಮ್ಮ ಈ ಪ್ರಷ್ನೆಗಳಿಗೆ ಉತ್ತರ ಬೇಕಾಗಿದೆ!

**ನಮ್ಮ ಮಾರುಕಟ್ಟೆಗಳಲ್ಲಿ ಸೌಲಭ್ಯಗಳು**

ಇದಲ್ಲದೆ ನಮಗೆ ಹಲವಾರು ಸವಾಲುಗಳಿವೆ. ಅನೇಕ ಪ್ರದೇಶಗಳಲ್ಲಿ ಉಚಿತ ಹಾಗು ಕ್ಲೀನ್ ಆಗಿರುವ ಸಾರ್ವಜನಿಕ ಶೌಚಾಲಯಗಳು ಇಲ್ಲ. ಇದರಿಂದ ಮಹಿಳಾ ಬೀದಿ ವ್ಯಾಪಾರಿಗಳಿಗೆ ಅನೇಕ ಸಮಸ್ಯೆಗಳು ಆಗುತ್ತವೆ. ಕೆಲವು ಪ್ರದೇಶಗಳಲ್ಲಿ ಇವೆ, ಆದರೆ ಅಲ್ಲಿ ಮಹಿಳೆಯರಿಗೆ ರೂ. 5 ತೆಗೆದುಕೊಳುತ್ತಾರೆ. ದಿನಕ್ಕೆ 3–4 ಬಾರಿ ಹೋದರೆ ಅದೇ

20 ರುಪಾಯಿ ಆಗುತ್ತದೆ! ಇನ್ನೊಂದು ಸಮಸ್ಯೆ ಎಂದರೆ, ನಮ್ಮ ಸರಕನ್ನು ರಾತ್ರಿ ವೇಳೆ ಸಂಗ್ರಹಿಸಲ ಸ್ಥಳವಿಲ್ಲ. ಇದರಿಂದ ನಾವು ಖಾಸಗಿ ಅವರಿಗೆ ದುಬಾರಿ ಬಾಡಿಗೆ ಕೊಡುತ್ತೇವೆ ಅಥವ ಕಷ್ಟಪಟ್ಟು ಅದನ್ನು ಮನೆಗೆ ತೆಗೆದುಕೊಂಡು ಹೋಗಬೇಕು, ಅಥವ ಮನೆ ಬಳಿಯೇ ವ್ಯಾಪಾರ ಮಾಡಬೇಕು – ದೂರ ಹೋಗುವಂತಿಲ್ಲ. ನಮಗೆ ಮಳೆ ಬಿಸಿಲಿನಿಂದ ರಕ್ಷಿಸಲು ಟಾರ್ಪಲಿನ್ ಹಾಕಿದರೆ ಅದನ್ನು ಅಧಿಕಾರಿಗಳು ಕಿತ್ತುಹಾಕುತ್ತಾರೆ! ಇಂತಹ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಬಿ.ಬಿ.ಎಮ್ನ್‌ಯಿಂದ ಸಾಧ್ಯ. ಪ್ರತಿ ವರ್ಷ, ಬಿ.ಬಿ.ಎಂ.ಪಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಬಡ್ಜೆಟ್ ತಯಾರಾಗುತ್ತದೆ. ಅದರೆ, ಅದರಲ್ಲಿ ಬೀದಿ ವ್ಯಾಪಾರಿಗಳಿಗೆಂದು ಕಿಂಚಿತ್ತು ಪಾಲು ಸಹ ಇಲ್ಲ. ಹಾಗಾಗಿ ನಾವು ಕೇಳುವುದೇನೆಂದರೆ, ಬರುವ ಬಿ.ಬಿ.ಎಂ.ಪಿ ಬಡ್ಜೆಟ್ಟನಲ್ಲಿ 1% ಪಾಲು ಬೀದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ಮೀಸಲಿಡಬೇಕು ಹಾಗು, ಮೀಸಲಿಟ್ಟ ಪ್ರಮಾಣದಲ್ಲಿ ನಮ್ಮ ಮಾರುಕಟ್ಟೆಗಳಲ್ಲಿ ಉಚಿತ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಬೇಕು – ವ್ಯಾಪಾರಿಗಳ ಸರಕನ್ನು ಸಂಗ್ರಹಿಸಲು ಗೋದಾಮ, ಕುಡಿಯುವ ನೀರು, ಶೌಚಾಲಯ, ಸೋಲಾರ್ ದೀಪಗಳು, ಮಳೆ/ಬಿಸಿಲುಗಳಿಂದ ರಕ್ಷಣೆಗೆ ವ್ಯವಸ್ತೆ, ಶಿಶುಮಂದಿರ, ಕಸ ವಿಲೇವಾರಿಗೆ ವ್ಯವಸ್ತೆ ಮಾಡಬೇಕು. ಅಲ್ಲದೆ, ರಸ್ತೆ ಅಗಲೀಕರಣ, ಮೇಲ್ ಸೇತುವೆಗಳು, ಟೆಂಡರ್ ಶ್ಯುರ್ ಮಾರ್ಗಗಳು, ಇತ್ಯಾದೆಗಳ ಮೇಲೆ ವೆಚ್ಚ ಮಾಡುವುದನ್ನು ನಿಲ್ಲಿಸಿ, ಬಿ.ಬಿ.ಎಂ.ಪಿ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ಹೆಚ್ಚು ವಿನಿಯೋಗವನ್ನು ಮಾಡಬೇಕು. ಹಾಗು ದಯವಿಟ್ಟು ರಸ್ತೆ ಬದಿಯಲ್ಲಿ ಹೆಚ್ಚು ಮರಗಳನ್ನು ನೆಡಬೇಕು. ಆಗ ನಮಗೂ ನೆರಳು ಸಿಗುತ್ತದೆ.

**ಪ್ಲಾಸ್ಟಿಕ್ ನಿಷೇದವನ್ನು ಯಶಸ್ವಿಗೊಳಿಸೋದು**

ರಾಜ್ಯ ಸರ್ಕಾರವು ಪ್ಲಾಸ್ಟಿಕನ್ನು ನಿಷೇದ ಮಾಡಿರುವುದು ನಾವು ಸ್ವಾಗತಿಸುತ್ತೇವೆ. ಇದರಿಂದ ಮಾವಳ್ಳಿಪುರ, ಬಿಂಗಿಪುರ, ಮಂಡೂರು ಮುಂತಾದ ಗ್ರಾಮಗಳಿಗೆ ಹೋಗುವ ಕಸ ಕಡಿಮೆ ಆಗುತ್ತದೆ. ಆದರೆ ಇದನ್ನು ಯಶಸ್ವಿಗೊಳಿಸಲು ಸರ್ಕಾರದ ಕಡೆಯಿಂದ ನಮಗೆ ಸಹಾಯ ಬೇಕಾಗಿದೆ. ಮೊದಲನೆಯದಾಗಿ, ನಮ್ಮ ಗ್ರಾಹಕರು ಇನ್ನು ಸಹ ಪ್ಲಾಸ್ಟಿಕ್ ಗ್ಲಾಸ್/ಕಪ್/ಶೀಟ್ ಕೇಳುತ್ತಾರೆ. ಹಾಗಾಗಿ, ಗ್ರಾಹಕರಲ್ಲಿ ಇನ್ನು ಹೆಚ್ಚು ಮಂದಿಗೆ ಅರಿವು ಮೂಡಿಸಬೇಕು. ಎರಡನೇಯದಾಗಿ, ಹಬ್ಬಗಳ ಕಾಲದಲ್ಲಿ ಬಾಳೆ ಎಲೆ ಹಾಗು ಅಡಿಕೆ ಎಲೆಯ ಪದಾರ್ಥಗಳ ರೇಟು ದುಬಾರಿಯಾಗುತ್ತದೆ. ಆದ್ದರಿಂದ ಸರ್ಕಾರ ನಮಗೆ ಕಡಿಮೆ ಬೆಲೆಯಲ್ಲಿ ಈ ವಸ್ಥುಗಳು ಸಿಗುವಂತೆ ನೆರವು ನೀಡಬೇಕು. ಮೂರನೇಯದಾಗಿ, ನಮ್ಮ ಪಾತ್ರೆ, ತಟ್ಟೆ, ಲೋಟ ತೊಳಿಯಲು ನಮಗೆ ಸಾರ್ವಜನಿಕ ನೆಲ್ಲಿ ಹಾಗು ಸ್ಥಳದ ವ್ಯವಸ್ತೆ ಮಾಡಿಕೊಡಬೇಕು.

**ಒಟ್ಟಾರೆ ನಮ್ಮ ಹಕ್ಕೊತಾಯಗಳೇನೆಂದರೆ –**

1) ಕಾವೇರಿನಗರ, ಕೋರಮಂಗಲ, ಶಿವಾಜಿನಗರ ಹಾಗು ಜಯನಗರ 9ನೇ ಬ್ಲಾಕಿನ ಬೀದಿ ವ್ಯಾಪಾರಿಗಳೊಡನೆ, ಮಹಾಪೌರರು, ಕಮಿಶನರ್ ರವರು, ಹಾಗೂ ಸಂಬಂಧಿತ ಕಾರ್ಪೊರೇಟರ್ ಗಳೊಡನೆ, ಜಂಟಿ ಮೀಟಿಂಗ್ ಒಂದನ್ನು ಆಯೋಜಿಸಬೇಕು

2) ಬರುವ ಬಿ.ಬಿ.ಎಂ.ಪಿ ಬಡ್ಜೆಟ್ಟನಲ್ಲಿ 1% ಪಾಲು ಬೀದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ಮೀಸಲಿಡಬೇಕು ಹಾಗು, ಮೀಸಲಿಟ್ಟ ಪ್ರಮಾಣದಲ್ಲಿ ನಮ್ಮ ಮಾರುಕಟ್ಟೆಗಳಲ್ಲಿ ಉಚಿತ ಸಾರ್ವಜನಿಕ ಸೌಲಭ್ಯಗಳನ್ನು (ವ್ಯಾಪಾರಿಗಳ ಸರಕನ್ನು ಸಂಗ್ರಹಿಸಲು ಗೋದಾಮು, ಕುಡಿಯುವ ನೀರು, ಶೌಚಾಲಯ, ಸೋಲಾರ್ ದೀಪಗಳು, ಮಳೆ/ಬಿಸಿಲುಗಳಿಂದ ರಕ್ಷಣೆಗೆ ವ್ಯವಸ್ತೆ, ಶಿಶುಮಂದಿರ, ಕಸ ವಿಲೇವಾರಿ ವ್ಯವಸ್ತೆ) ಒದಗಿಸಬೇಕು

3)ಬೀದಿ ವ್ಯಾಪಾರಿಗಳ ಕಾಯ್ದೆ ಬಗ್ಗೆ ನಗರದ ಎಲ್ಲಾ ಬೀದಿ ವ್ಯಾಪಾರಿಗಳಿಗೂ ಹಾಗು ಅಧಿಕಾರಿಗಳಿಗೆ ಮಾಹಿತಿ ತಲುಪಿಸಬೇಕಾಗಿದೆ. ಹಾಗಾಗಿ ರಾಜ್ಯ ಸರ್ಕಾರ ಈ ಕೂಡಲೇ ಇದರ ಬಗ್ಗೆ ಕಾನೂನು ಅರಿವು ಶಿಬಿರಗಳನ್ನು ಆಯೋಜಿಸಬೆಕು. ಬೀದಿ ವ್ಯಾಪಾರಿಗಳ ಕಾನೂನು ಉಲ್ಲಂಘಿಸದಂತೆ ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ಹಾಗು ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಬೇಕು

4) ಬೀದಿ ವ್ಯಾಪಾರಿಗಳ ಕಾನೂನಿನ ಕಲಂ 3(3)ರಂತೆ ನಗರದಲ್ಲಿ ಕಾಯ್ದೆಯಡಿ ಸಮೀಕ್ಷೆ ನಡೆಯುವ ಮುನ್ನ ಯಾವುದೇ ಬೀದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಬಾರದು

5) ಬೀದಿ ವ್ಯಾಪಾರಿಗಳೊಂದಿಗೆ ಅಧಿಕಾರಿಗಳು ಗೌರವದಿಂದ ವರ್ತಿಸಬೇಕು

6) ಬಿ.ಬಿ.ಎಂ.ಪಿ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ಹೆಚ್ಚು ವಿನಿಯೋಗವನ್ನು ಮಾಡಬೇಕು

7) ಬೃಹನ್ ಮುಂಬೈ ಮುನಿಸಿಪಾಲ್ ಕಾರ್ಪೊರೇಶನ್ ರವರು ಅವರ ಸಾರ್ವಜನಿಕ ಸಾರಿಗೆಯಲ್ಲಿ ವಿನಿಯೋಗ ಮಾಡಿದ ಹಾಗೆ, ಬಿ.ಬಿ.ಎಂ.ಪಿಯು ಬಿ.ಎಂ.ಟಿ.ಸಿಯಲ್ಲಿ ಸುಮಾರು ರೂ. 150 ಕೋಟಿಯಷ್ಟು ಹಣವನ್ನು ನೀಡಬೇಕು.

8) ಪ್ಲಾಸ್ಟಿಕ್ ನಿಷೇದವನ್ನು ಯಶಸ್ವಿಗೊಳಿಸಲು ನಮಗೆ ಸಹಾಯಮಾಡಬೇಕು

9)ಬೆಂಗಳೂರಿನ ರಸ್ತೆ ಬದಿಗಳಲ್ಲಿ ಮುಂದಿನ ಒಂದು ವರ್ಷದೊಳಗೆ 1 ಲಕ್ಷ ಸಸಿಗಳನ್ನು ನೆಡಬೇಕು

10)ಬೀದಿ ವ್ಯಾಪಾರದ ಕಾನೂನಿನಲ್ಲಿ ಸೂಚಿಸಿದಂತೆ ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಬಿ.ಬಿ.ಎಂ.ಪಿ ಅಡಿಯಲ್ಲಿ ತಾತ್ಕಾಲಿಕ 'ವಿವಾದ ಪರಿಹಾರ ವ್ಯವಸ್ಥೆ'ಯನ್ನು ಸ್ಥಾಪಿಸಬೇಕು


# ಬೃಹತ್ ಬೆಂಗಳೂರು ಬೀದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ

**ಆಲ್ ಇಂಡಿಯಾ ಸೆಂಟ್ರೆಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್(ಎ.ಐ.ಸಿ.ಸಿ.ಟಿ.ಯು) ನ ಅಂಗ ಸಂಸ್ಥೆ**

**# 122/4, ಇನ್ಫೆಂಟ್ರಿ ರಸ್ತೆ, ಬೆಂಗಳೂರು – 560 001 ಮೊ. : 9880316961/9845637421/9686757053/9880595032**